GSTN : 29ABAFS6960Q1ZA

Phone : (08384) 226571, 227535
Fax. : (08384) 224075
E-Mail : sahyadripapers@hotmail.com

# SAHYADRI PAPERS

Mfg. Quality Hand Made Papers, Office Files, Envelopes, Paper Bags Etc.
(Recognised by Khadi & V. I. Commission Mumbai)

Banavasi Road, SIRSI 581401
Karnataka, India

Ref: SPS/ Land/ 2019-20

Date: 05-12-2019

ಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಉ.ಕ.ಜಿಲ್ಲೆ
ಕಾರವಾರ

ಮಾನ್ಯರೇ,

ವಿಷಯ: ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಫಾರಂ ನಂ. 3 ರಲ್ಲಿ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ: E-office.No.KFD/HOFF/A52K(GFL) 114/2019 –FC-KFD

ನಾವು ಶಿರಸಿಯಲ್ಲಿ "ಸಹ್ಯಾದ್ರಿ ಪೇಪರ್ಸ" ಹೆಸರಿನಲ್ಲಿ ಕೈಕಾಗದ ತಯಾರಿಸುವ ಉದ್ದಿಮೆಯನ್ನು ನಡೆಸುತ್ತಿದ್ದೇವೆ. ನಮಗೆ ಈ ಉದ್ದಿಮೆಯನ್ನು ಪ್ರಾರಂಭಿಸಲು ಕರ್ನಾಟಕ ಘನಸರಕಾರವು ಶಿರಸಿ ಗ್ರಾಮದ ಸರ್ವೆನಂ.232ರಲ್ಲಿ ಲೀಸ್ ಆಧಾರದ ಮೇಲೆ 5 ಎಕರೆ ಜಾಗೆಯನ್ನು 1973 ರಲ್ಲಿ ನೀಡಿತ್ತು. ಸದರೀ ಜಾಗೆಯಲ್ಲಿ ನಾವು 1976 ರಲ್ಲಿ ನಮ್ಮ ಉದ್ದಿಮೆಯನ್ನು ಪ್ರಾರಂಭಿಸಿ ಈ ವರೆಗೂ ನಡೆಸಿಕೊಂಡು ಬರುತ್ತಿದ್ದೇವೆ. ಈಗ ನಮ್ಮ ಉದ್ದಿಮೆಗೆ ನೀಡಿದ ಜಾಗೇಯ ಲೀಸ್ ಅವಧಿಯು ಜೂನ್ 20, 2020 ರ ವರೆಗೆ ಇರುತ್ತದೆ. ಈ ಲೀಸ್ ಅವಧಿಯನ್ನು ಮುಂದುವರೆಸಿಕೊಡಬೇಕೆಂದು ನಾವು ಈಗಿನ ನಿಯಮದಂತೆ ಆನಲೈನ್ ಅರ್ಜಿಯನ್ನು ಸಲ್ಲಿಸಿದ್ದೇವೆ. ಆದರೆ ಅವರು ಉಳಿದ ನಿಬಂಧನೆಗಳೊಂದಿಗೆ ಅರಣ್ಯ ಹಕ್ಕು ಕಾಯ್ದೆಗಳ ಅಡಿಯಲ್ಲಿ ಜಿಲ್ಲಾಧಿಕಾರಿಗಳಿಂದ ಫಾರಂ ನಂ 3ರಂತೆ ಪ್ರಮಾಣ ಪತ್ರ ಪಡೆದುಲೊಂಡು ಸಲ್ಲಿಸುವಂತೆ ಸೂಚಿಸಿರುತ್ತಾರೆ. ಈ ಕುರಿತು ಎಡಿಷನಲ್ ಪ್ರೀನ್ಸಿಪಾಲ್, ಚೀಫ ಕನ್ಸರ್ವೇಟರ್ ಆಫ ಫಾರೆಸ್ಟ ಆಫೀಸ್‌ರ ಅವರಿಂದ ಬಂದ ಪತ್ರವನ್ನೂ ಲಗತ್ತಿಸಿದ್ದೇವೆ.

ಮಾನ್ಯರೇ ಈ ಸಂದರ್ಭದಲ್ಲಿ ಈ ಕೆಳಗಿನ ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ನಾವು ಈ ಲೀಸ್ ಅವಧಿಯ ಕುರಿತಾಗಿ ಮಾನ್ಯ ಗೌರವಾನ್ವಿತ ಪ್ರಧಾನಮಂತ್ರಿಗಳಿಗೆ ಪತ್ರ ಬರೆದಿದ್ದು , ಅವರು ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಆದೇಶಿಸಿದ್ದರು. ಹಿಂದಿನ ಜಿಲ್ಲಾಧಿಕಾರಿಗಳು ನೀಡಿದ ವರದಿಯ ಯಥಾ ನಕಲನ್ನು ತಮ್ಮ ಅವಗಾಹನೆಗೆಂದು ಲಗತ್ತಿಸಿದ್ದೇವೆ.

ಕಾರಣ, ನಾವು ತಮ್ಮಲ್ಲಿ ವಿನಂತಿಸಿಕೊಳ್ಳುವದೇನೆಂದರೆ ನಮಗೆ ಸದುದ್ದೇಶಕ್ಕಾಗಿ ಜಾಗೆಯನ್ನು ಲೀಸ್ ಕೊಟ್ಟ ಬಗ್ಗೆ ಕಾಗದ ಪತ್ರವನ್ನು ಪರಿಶೀಲಿಸಿ, ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಫಾರಂ ನಂ 3ರಲ್ಲಿ ಪ್ರಮಾಣಪತ್ರವನ್ನು ನೀಡಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುತ್ತಿದ್ದೇವೆ.

ಧನ್ಯವಾದಗಳೊಂದಿಗೆ–

5/12/19
ಸ್ವೀಕೃತಿ ಗುಮಾಸ್ತ
ಜಿಲ್ಲಾಧಿಕಾರಿಗಳ ಕಛೇರಿ, ಕಾರವಾರ (ಉ.ಕ)

ತಮ್ಮ ವಿಶ್ವಾಸಿ

FOR M/S. SAHYADRI PAPERS

PARTNER

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ - 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : (08382) 226406/226471/222071, ಫ್ಯಾಕ್ಸ್: 226603/222072 Email: dckarwar@gmail.com

ನಂ. ಕಂಶಾ/ಅರಣ್ಯ/ವಿವ-E-10907/2016-17 ದಿನಾಂಕ: 05-08-2017

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯ ಪಡೆ ಮುಖ್ಯಸ್ಥರು)
ಅರಣ್ಯ ಭವನ
ಮಲ್ಲೇಶ್ವರಂ, ಬೆಂಗಳೂರು -03

ಮಾನ್ಯರೇ

ವಿಷಯ : ಅರಣ್ಯ ಜಮೀನಿನಲ್ಲಿರುವ ಜಾಗೆಯ ಲೀಸ್ ಅವಧಿ ಹೆಚ್ಚಿಸಿಕೊಡುವ ಕುರಿತು

ಉಲ್ಲೇಖ : 1.ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 27-03-2017
2.ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 01-06-2017
3.ಸಹಾಯಕ ಆಯುಕ್ತರು, ಶಿರಸಿ ಉಪ ವಿಭಾಗ, ಶಿರಸಿರವರ ಪತ್ರ ನಂ. ಅರಣ್ಯ ಹಕ್ಕು/ವಿವ 06/2017-18
4.ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ ರವರ ಪತ್ರ ನಂ. ಎ 3/ಜಿಎಫ್.ಎಲ್/ಸಿಆರ್- /2017-18 ದಿನಾಂಕ: 17-07-2017

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಎಮ್.ವಿ. ಜೋಶಿ ಸೈಹ್ಯಾದ್ರಿ ಪೇಪರ್ಸ್ ಬನವಾಸಿ ರೋಡ್ ಶಿರಸಿರವರು ಶಿರಸಿ ತಾಲೂಕಿನ ಬಚಗಾಂವ್ ಗ್ರಾಮದ ಸರ್ವೆ .ನಂ 232 ಕ ಕ್ಷೇತ್ರ 8-16-0 ಪೈಕಿ 2 ಹೆಕ್ಟರ್ ಅರಣ್ಯ ಜಮೀನಿನ ಲೀಸ್ ಅವಧಿ ಮುಂದುವರೆಸುವ ಕುರಿತು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಅರ್ಜಿ ಸಲ್ಲಿಸಿದಂತೆ ಈ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಉಲ್ಲೇಖ (1) & ಉಲ್ಲೇಖ (2) ರ ಈ ಕಾರ್ಯಾಲಯದ ಪತ್ರದಂತೆ ಸಹಾಯಕ ಆಯುಕ್ತರು ಶಿರಸಿರವರಿಗೆ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿರವರಿಗೆ ತಿಳಿಸಲಾಗಿತ್ತು.

ಸಹಾಯಕ ಆಯುಕ್ತರು., ಶಿರಸಿ ಉಪ ವಿಭಾಗ, ಶಿರಸಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ ರವರ ವರದಿಯಂತೆ ಶಿರಸಿ ತಾಲೂಕ ದೊಡ್ನಳ್ಳಿ ಪಂ. ವ್ಯಾಪ್ತಿಗೆ ಬರುವ ಬಚಗಾಂವ್ ಗ್ರಾಮದ ಸರ್ವೆ ನಂ. 232 ಕ್ಕೆ ಕ್ಷೇತ್ರ 8-16-0 ಪೈಕಿ 2 ಹೆಕ್ಟೇರ್ ಅರಣ್ಯ ಜಮೀನನ್ನು ಶ್ರೀ ಎಮ್.ವಿ. ಜೋಶಿ ಸೈಹ್ಯಾದ್ರಿ ಪೇಪರ್ಸ್ ಬನವಾಸಿ ರೋಡ್ ಶಿರಸಿರವರು ರವರು ದಿನಾಂಕ: 11-10-1973 ರಿಂದಲೂ ಲೀಸ್ ಮೇಲೆ ಪಡೆದುಕೊಂಡು ಕೈಗಾರಿಕೆಯ ಉದ್ದೇಶಕ್ಕೆ ಬಳಸಿಕೊಂಡು ಬಂದಿರುತ್ತಾರೆ. ಲೀಸ್ ಅವಧಿಯನ್ನು 2019-2020 ರ ಅವಧಿ ವರೆಗೆ ವಿಸ್ತರಿಸಿ ನವೀಕರಿಸಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಪ್ರಸ್ತಾಪಿತ ಭೂಮಿಯ ಸುತ್ತಲೂ ಖಾಸಗಿ ಭೂ ಒಡೆತನದ

ನಂ. ಕಂಶಾ/ಪ್ರಧಾನ ಮಂತ್ರಿ ಜನಸ್ಪಂದನ/ವಿವ-65/2016-17

ಮಾಲೀಕತ್ವವನ್ನು ಹೊಂದಿದ್ದು ಕೈಗಾರಿಕೆಗಳು ಅಭಿವೃದ್ಧಿ ಹೊಂದಿದ ಪ್ರದೇಶ ಆಗಿರುತ್ತದೆ. ಉಪಯೋಗಿ ಸಂಸ್ಥೆಯವರು ಸಣ್ಣ ಕೈಗಾರಿಕೆಯನ್ನು ಆಧುನೀಕರಣಗೊಳಿಸಲು ಬ್ಯಾಂಕಿನಿಂದ ಸಾಲ ಪಡೆಯಲು 99 ವರ್ಷಗಳ ಲೀಸ್ ಅವಧಿಯನ್ನು ವಿಸ್ತರಿಸಿ ನೀಡಲು ಕೋರಿಕೊಂಡಿರುತ್ತಾರೆ. ಮತ್ತು ಸದರಿ 2 ಹೆಕ್ಟೇರ್ ಜಾಗದಲ್ಲಿ ಬುಡಕಟ್ಟು ಜನಾಂಗ ಹಾಗೂ ಇತರೇ ಪಾರಂಪರಿಕ ಅರಣ್ಯವಾಸಿಗಳು ಅರಣ್ಯ ಹಕ್ಕು ಸಮಿತಿಗೆ ಅರ್ಜಿ ಸಲ್ಲಿಸಿರುವುದಿಲ್ಲ ಕಾರಣ ಸದರ ಅರಣ್ಯ ಜಮೀನಿನ ಲೀಸ್ ಅವಧಿ ಮುಂದುವರಸುವ ಬಗ್ಗೆ ಮುಂದಿನ ಕ್ರಮದ ಕುರಿತು ಮಾನ್ಯರಿಗೆ ಆದರಪೂರ್ವಕ ಸಲ್ಲಿಸಿದೆ..

ತಮ್ಮ ವಿಶ್ವಾಸಿ

8/8

ಜಿಲ್ಲಾಧಿಕಾರಿ,

ಉತ್ತರ ಕನ್ನಡ, ಕಾರವಾರ

ಪ್ರತಿ : ಶ್ರೀ ಎಮ್.ವಿ. ಜೋಶಿ ಸೈಹ್ಯಾದ್ರಿ ಪೇಪರ್ಸ್ ಬನವಾಸಿ ರೋಡ್ ತಾಲ್ಲೂಕ ಶಿರಸಿ ರವರಿಗೆ ಮಾಹಿತಿಗಾಗಿ